Sri B. RACHIAH.—We will see that these roads are completed as early as possible.

ಶ್ರೀ ಎಸ್. ಪಿ. ಫಾಯಜೆ.—ಅಂಕೋಲ ತಾಲ್ಲೂಕಿನೊಳಗೆ ಮಾನುಗಾನಿಕೆ ರಸ್ತೆಗಳ ಬಗ್ಗೆ ಅಂದಾಜುಗಳು ಮಂಜೂರಾಗಿದ್ದರೂ ಅದಕ್ಕೆ ಬೇಕಾದ ಹಣವನ್ನು ಸರ್ಕಾರದವರು ಒದಗಿಸಿಲ್ಲ. ಆದ್ದರಿಂದ ಕೂಡಲೇ ಆ ಹಣವನ್ನು ಒದಗಿಸುತ್ತೀರಾ ?

ಶ್ರೀ ಬಿ. ರಾಚಯ್ಯ.—ಆಲ್ಲಿನ 11 ರಸ್ತೆಗಳ ಪೈಕಿ 7 ರಸ್ತೆಗಳು ಕಾರವಾರ ಜಿಲ್ಲೆಯಲ್ಲಿಯೇ ಇವೆ. ಅವುಗಳ ಪೈಕಿ 4 ರಸ್ತೆಗಳು ಅಂಕೋಲದಲ್ಲಿವೆ. ಈ ತಕ್ಷಣ ಅದಕ್ಕೆ ಹಣವನ್ನು ಒದಗಿಸುವು ದಕ್ಕಾಗುವುದಿಲ್ಲ.

Sri R. S. HEGDE.—When do the Government propose to fix up an agency for maintenance of these roads as in the caastal malnad roads, they get deteriorated if there is no maintenance ?

Sri B. RACHIAH.—It is under consideration, whether the P. W. D. should maintain or transfer these roads to the Taluk Boards.

Sri K. P. REVENASIDDAPPA.—As far as possible ಎಂದು ಹೇಳುವ ಉತ್ತರಕ್ಕೆ ನಮಾರು ಸರ್ಕಾರ ನಿಗದಿ ಮಾಡಿರುವ ಅವಧಿ 3 ತಿಂಗಳೋ, 6 ತಿಂಗಳೋ ಅಥವಾ 9 ತಿಂಗಳೋ ?

ಶ್ರೀ ಬಿ. ರಾಚಯ್ಯ.—ಹಿಂದಿನ ವರ್ಷದಲ್ಲಿ ಏನು ಹಣವನ್ನು ಒದಗಿಸಿದ್ದೇವೋ ಆ ಹಣವನ್ನು ಪೂರ್ತಿಯಾಗಿ ಖರ್ಚು ಮಾಡಿವಾರೆ. ಆದರೆ ಹೊಸದಾಗಿ ಕ್ಯಾಷ್ ಪ್ರೋಗ್ರಾಂಗೆ ದುಡ್ಡು ಕೊಡುವುದಕ್ಕೆ ಪಿ.ಡಬ್ಲ್ಯು.ಡಿ. ಯವರು ಜೆಂಡರುಗಳನ್ನು ಕರೆಯಬೇಕು. ಅದಕ್ಕೆ ಏಜೆನ್ಸಿಯನ್ನು ನಿಗದಿ ಮಾಡಬೇಕು ಅದನ್ನು ಜೇಬಿನಿಂದ ತೆಗೆದುಕೊಡುವುದಿಲ್ಲ.

Sri R. S. HEGDE.—In view of the scheme of construction of fishery roads continued by the Government, may I know what are the fresh roads taken up in North Kanara District now that grants are available from the centre ?

Sri B. RACHIAH.—I have already mentioned that about four roads are in North Kanara district. Out of 11 roads seven roads, have been taken up in Karwar district alone. We have been trying to get some more funds from the centre and we are awaiting their reply.

Sri SIDDIAH KASHIMATH.—May I know the amount spent for these roads during the Third Plan ?

Sri B. RACHIAH.—Rs. 5, 27, 558 earmarked for 24 roads.

ಶ್ರೀ ಎಚ್. ಡಿ ದೇವೇಗೌಡ.—ಈ ರಸ್ತೆಗೆ ಕೇಂದ್ರ ಸರ್ಕಾರದಿಂದ ಬರತಕ್ಕ ಪಾಲು ಎಷ್ಟು ಮತ್ತು ರಾಜ್ಯ ಸರ್ಕಾರದ ಪಾಲು ಎಷ್ಟು ?

ಶ್ರೀ ಬಿ. ರಾಚಯ್ಯ.—ಇವೆಲ್ಲವೂ ಕೇಂದ್ರ ಸರ್ಕಾರದಿಂದ ಬಂದಿರತಕ್ಕದ್ದು.

Grant of Land for Coffee Cultivation

*Q.—218. Smt. B. L. SUBBAMMA (Chickmagalur).—

Will the Government be pleased to state :—

(*a*) the extent of land granted from 1962 to 1965 in Mudigere and Chickmagalur Taluks in Chikkamagalur District for coffee cultivation Talukwise figures may be furnished).

(*b*) out of which the extent of land actually cultivated and coffee grown ;

(*c*) the extent of land left fallow after removing the trees ;

(SMT. B. L. SUBBAMMA)

(*d*) what action they have decided to take against those who have left the lands fallow after cutting and selling the trees and also using them for charcoal ?

A.—Sri M. V. KRISHNAPPA (Minister for Revenue).

(*a*) *Mudigere*	*Chickmagalur*
1962-65	
596-31	1524-12

(*b*) Information is not readily available.

(*c*) Does not arise in view of reply to clause (*b*) of the question.

(*d*) Action will be taken to resume the land to Government as per rules in case the conditions of grant are violated.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಸದರಿ ಮಾಹಿತಿಯು ಸಧ್ಯಕ್ಕೆ ದೊರೆಯುವಂತಿಲ್ಲವೆಂದು ಹೇಳಿದೆ. ಅಂದಮೇಲೆ ಆ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಎಂ.ವಿ. ಕೃಷ್ಣಪ್ಪ.—ಕಾಫಿಯ ತೋಟಕ್ಕೋಸ್ಕರ ಜಮೀನು ಕೊಡುವುದರ ಬಗ್ಗೆ ಸ್ಪೆಷಲ್ ರೂಲ್ಸ್ ಇವೆ. ಸಾಮಾನ್ಯವಾಗಿ ರೈತನಾದವನು ಐದು ವರ್ಷಗಳೊಳಗೆ ಕಾಫಿ ತೋಟವನ್ನು ಮಾಡದಿದ್ದರೆ ಸರ್ಕಾರ ಅದನ್ನು ರದ್ದು ಮಾಡುತ್ತದೆ. ಆ ಬಗ್ಗೆ ರೂಲ್ಸ್‌ಮಾಡಿ ಕೇವಲ 3-4 ವರ್ಷಗಳಾಗಿವೆ. ರೂಲ್ಸ್ ಪ್ರಕಾರ ಐದು ವರ್ಷಗಳ ಅವಧಿ ಪೂರೈಸಿದ ಮೇಲೆ ಸರ್ಕಾರ ತಕ್ಕ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಸರ್ಕಾರದವರು ರೂಲ್ಸ್‌ಮಾಡಿ 4 ವರ್ಷಗಳಾದರೂ ಈ ಒಂದು ಕೇಸನ್ನು ಇದುವರೆಗೆ ಪತ್ತೆ ಮಾಡಲಿಲ್ಲ. ಹಾಗಾದರೆ ಸರ್ಕಾರದವರು ಆ ಬಗ್ಗೆ ಅಷ್ಟು ಆಸಕ್ತಿಯಿಂದ ಇಲ್ಲವೆಂಬುದು ತಿಳಿಯೋಣವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಐದು ವರ್ಷಗಳಾದ ಮೇಲೆ ಸರ್ಕಾರ ತನಿಖೆ ಮಾಡಬೇಕು. ಅವನ್ನು ಐದು ವರ್ಷಗಳೊಳಗೆ ಕಾಫಿ ತೋಟ ಮಾಡಬೇಕು. ಐದು ವರ್ಷಗಳು ಆಗುವುದರೊಳಗೇನಾದರೂ ಯಾವ ಕೇಸನ್ನಾದರೂ ತನಿಖೆ ಮಾಡಿದರೆ ಅದು ನಿಷ್ಪ್ರಯೋಜನವಾಗುತ್ತದೆ. ಪೂರ್ತಿ 5 ವರ್ಷಗಳ ಕಾಲ ಅವಕಾಶ ಅವರಿಗೆ ಕೊಡಬೇಕು. ಆಮೇಲೆ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಎಚ್. ಆರ್. ಕೇಶವಮೂರ್ತಿ.—ಕಾಫಿ ಬೆಳೆಗೆ ಕೊಟ್ಟಂತಹ ಜಮೀನು ಈ ರೀತಿಯಾಗಿ ವಾಳು ಬಿದ್ದಿರುವ ಕಾರಣ ಬೇರೆ ಬೇರೆ ಜಿಲ್ಲೆಗಳಿಂದ ಹೋಗಿ ದುಡ್ಡು ಸಂಪಾದನೆ ಮಾಡುವ ದೃಷ್ಟಿಯಿಂದ ಆ ಕಾಫಿ ಜಮೀನುಗಳನ್ನು ತೆಗೆದುಕೊಂಡು ಬೇರೆ ಬೆಳೆಯನ್ನು ಮಾಡುತ್ತಿರುವುದು ಸರಿಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಲೆನಾಡಿನಲ್ಲಿ ಜನಸಂಖ್ಯೆ ಕಡಮೆ. ಅವಕ್ಕೋಸ್ಕರವಾಗಿ ಮೈದಾನ ಪ್ರದೇಶಗಳಿಂದ ಅಲ್ಲಿಗೆ ಜನಗಳು ಹೋಗುತ್ತಾರೆ. ಮಲೆನಾಡಿನಲ್ಲಿ ಜನಸಂಖ್ಯೆ ಕಡಿಮೆ ಇರುವ ಕಾರ್ಯ ಅಲ್ಲಿ ಅದು ಸಾಗುವಳಿಯಾಗದೆ ಅನೇಕ ಜಮೀನು ಬೀಡಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಕಾಫಿ ಬೆಳೆಯನ್ನು ಕಂಡೀಷನ್ಸ್ ಪ್ರಕಾರ ಬೆಳೆಯದೇ ಹೋದರೆ ಜಮೀನನ್ನು ವಾಪಸು ತೆಗೆದುಕೊಳ್ಳುತ್ತೇವೆಂದು ಮಂತ್ರಿಗಳು ತಿಳಿಸಿದರು. ಕೆಲವರು ಜಮೀನಿನ ಮೇಲೆ ಸರ್ಕಾರದಲ್ಲಿ ಲ್ಯಾಂಡ್ ಇಂಪ್ರೂವ್‌ಮೆಂಟ್ ಬಗ್ಗೆ ತಕಾವಿ ಸಾಲ ತೆಗೆದು ಕೊಂಡು ಆ ಸಾಲದ ಆಧಾರದಮೇಲೆ ಮತ್ತು ಹಂಗಾಮಿಯಾಗಿ ಬೇರೆ ಸಾಲ ತೆಗೆದುಕೊಂಡಿರುವಾಗ ಅವನು ಯಾವ ರೀತಿ ಆ ಸಾಲಗಳನ್ನು ತೀರಿಸಬೇಕು ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಾಫಿ ಬೋರ್ಡಿನವರು ಹೆಚ್ಚಿಗೆ ಕಾಫಿ ಬೆಳೆಯುವ ಉದ್ದೇಶದಿಂದ ಕಾಫಿ ಜಮೀನುಗಳ ಮೇಲೆ ಸಾಲ ಕೊಡುತ್ತಾರೆ. ಬಹುಶಃ ಅವರು ಆ ರೀತಿಯಾಗಿ ಸಾಲ ಕೊಟ್ಟಿದ್ದರೆ ಅದು ಅವರಿಗೆ ಸಂಬಂಧಪಟ್ಟದ್ದು. ಒಂದು ವೇಳೆ ಸರ್ಕಾರವೇನಾದರೂ ಆ ರೀತಿ ಕೊಟ್ಟಿದ್ದರೆ 5 ವರ್ಷಗಳಾದ ಮೇಲೆ ಏನಾದರೂ ರದ್ದು ಆಗಿದ್ದರೆ ಆ ಪ್ರಶ್ನೆಯನ್ನು ವಿಚಾರ ಮಾಡುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಕಾಫಿ ಜಮೀನು ಅವರ ಹೆಸರಿಗೆಂದು ಕನ್‌ಫರ್ಮ್ ಆಗುವುದಕ್ಕೆ ಮೊದಲು ರ್ಯಾಂಡ್ ಇಂಪ್ರೂವ್‌ಮೆಂಟ್ ಬ್ಯಾಂಕಿನಲ್ಲಿಯೋ ಅಥವಾ ಸಹಕಾರ ಸಂಘಗಳಲ್ಲಿಯೋ ಹಣವನ್ನು ಸಾಲವಾಗಿ ಕೊಟ್ಟಿರತಕ್ಕ ನಿದರ್ಶನಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ಆ ರೀತಿ ಒಂದು ವೇಳೆ ಬಂದಿದ್ದರೆ ಆದರ ಮೇಲೆ ಏನು ಕ್ರಮವನ್ನು ತೆಗೆದುಕೊಂಡು ಅವರಿಗೆ ಕೊಟ್ಟ ಸಾಲವನ್ನು ವಸೂಲು ಮಾಡಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಾಫಿ ಕಲ್ಟಿವೇಷನ್ ರೂಲ್ಸ್ ಪ್ರಕಾರ ಐದು ವರ್ಷಗಳವರೆಗೂ ಅವನ ಹೆಸರಿಗೆ ಆಗುವುದಿಲ್ಲ. ಆ ಐದು ವರ್ಷಗಳೊಳಗೆ ಅವನು ಕಾಫಿ ಸಾಗುವಳಿ ಮಾಡಿ ಅವನ ಹೆಸರನ್ನು ಕನ್‌ಫರ್ಮ್ ಮಾಡಿಸಿಕೊಳ್ಳಬೇಕು. ಒಂದು ವೇಳೆ ಅವನ ಹೆಸರು ಕನ್‌ಫರ್ಮ್ ಮಾಡುವುದರೊಳಗೆ ಯಾವುದಾದರೂ ಬ್ಯಾಂಕಿನವರು ಅವನಿಗೆ ಸಾಲದ ರೂಪವಾಗಿ ಹಣವನ್ನು ಕೊಟ್ಟಿದ್ದರೆ ಅದು ಅವರ ತಪ್ಪಾಗುತ್ತದೆ. ಅದಕ್ಕೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

Bovi Colony in Byrasandra Village.

*Q.—248. Sri D. MUNICHINNAPPA (Bangalore South).—

Will the Government be pleased to state :—

(*a*) whether it is a fact that the previous Minister for Social Welfare had laid foundation-stone for the Bovi Colony in Byrasandra village, Jayanagar East, Bangalore South Taluk ;

(*b*) whether it is fact that a sum of Rs. 400 per house, had been sanctioned for construction of 40 houses in the above colony ;

(*c*) the amount of expenditure incurred on the Houses constructed there together with the expenditure incurred under each item for each house ?

A.—Sri S. NIJALINGAPPA (Chief Minister).—

(*a*) Yes.

(*b*) Yes.

(*c*) *Vide* Statement appended.

STATEMENT.

Showing the expenditure under each item for construction of Bovi colony buildings at Byrasandra village, Jayanagar East, Bangalore.

Sl. No.	Particulars of work	Cost in Rs.
1	2	3
1	Excavation in hard gravelly soil for foundations	205
2	Laying 1:6:12 cement concrete for foundations with 1½" jelly.	1,217
3	Size stone in clay for foundations in courses of 8" with bond stones.	4,570